Udayavani Newspaper Publication dated 12.05.23

# ಕರ್ಣಾಟಕ ಬ್ಯಾಂಕ್ ಲಿ.

(ನೋಂದಾಯಿತ ಮತ್ತು ಪ್ರಧಾನ ಕಚೇರಿ: ಮಹಾವೀರ ವೃತ್ತ, ಕಂಕನಾಡಿ, ಮಂಗಳೂರು-575 002)
ಕಂಪನಿ ಗುರುತು ಸಂಖ್ಯೆ : L85110KA1924PLC001128 ಇ-ಮೇಲ್ : investor.grievance@ktkbank.com,
ಕಂಪನಿ ಜಾಲತಾಣ : www.karnatakabank.com ಫೋನ್ ನಂ. : 0824-2228222

## ನೋಟೀಸು (ಬ್ಯಾಂಕಿನ ಷೇರುದಾರರ ಗಮನಕ್ಕಾಗಿ)

ಈ ಮೂಲಕ ಬ್ಯಾಂಕಿನ ಷೇರುದಾರರಿಗೆ ತಿಳಿಯಪಡಿಸುವುದೇನೆಂದರೆ, ಕಂಪನಿ ಕಾಯ್ದೆ-2013ರ ಸೆಕ್ಷನ್ 124(6) ಮತ್ತು ಹೂಡಿಕೆದಾರರ ಶಿಕ್ಷಣ ಮತ್ತು ಸಂರಕ್ಷಣಾ ನಿಧಿ ಪ್ರಾಧಿಕಾರ ನಿಯಮಗಳು 2016ರ (IEPF Rules) ನಿಬಂಧನೆಗಳಿಗೆ ಅನುಗುಣವಾಗಿ ಸತತ ಏಳು ವರ್ಷದ ಅವಧಿಗೆ ಪಾವತಿಯಾಗದೆ ಉಳಿದಿರುವ ಲಾಭಾಂಶವನ್ನು (ಡಿವಿಡೆಂಡ್) ಸಂಬಂಧಪಟ್ಟ ಷೇರುಗಳೊಂದಿಗೆ, IEPFಗೆ ವರ್ಗಾವಣೆ ಮಾಡುವುದು ಕಡ್ಡಾಯವಾಗಿರುತ್ತದೆ.

ಈ ವಿಷಯದ ಕುರಿತಾಗಿ, ಹಣಕಾಸು ವರ್ಷ 2023-24ರಲ್ಲಿ IEPFಗೆ ವರ್ಗಾಯಿಸಲಾಗುವ ಡಿವಿಡೆಂಡ್ ಮತ್ತು ಷೇರುಗಳ ಬಗೆಗಿನ ಮಾಹಿತಿಯನ್ನು ಸಂಬಂಧಪಟ್ಟ ಷೇರುದಾರರಿಗೆ ದಿನಾಂಕ 08.05.2023ರ ಪತ್ರದ ಮೂಲಕ ತಿಳಿಸಲಾಗಿದೆ. ಅದಲ್ಲದೆ ಇದಕ್ಕೆ ಸಂಬಂಧಪಟ್ಟ ಷೇರುದಾರರ ಮಾಹಿತಿಯನ್ನು ಬ್ಯಾಂಕಿನ ಜಾಲತಾಣ https://karnatakabank.com/investor-portal/shareholder-Information ನಲ್ಲಿ ಕೂಡ ಪ್ರಕಟಿಸಲಾಗಿದೆ. ಈ ವಿವರಗಳನ್ನು ಷೇರುದಾರರು ಪರಿಶೀಲಿಸಿ, ಪಾವತಿಯಾಗದೆ ಉಳಿದಿರುವ ಲಾಭಾಂಶವನ್ನು 18.08.2023 ರ ಮುಂಚಿತವಾಗಿ ಪಡೆಯಬೇಕಾಗಿ ಈ ಮೂಲಕ ಕೋರುತ್ತೇವೆ.

ಈ ಮೇಲೆ ಉಲ್ಲೇಖಿಸಿದ ಷೇರುಗಳು ಭೌತಿಕ ರೂಪದಲ್ಲಿದ್ದರೆ, IEPF ನಿಯಮಗಳ ಪ್ರಕಾರ ಅಂತಹ ಷೇರುಗಳಿಗೆ, ಷೇರು ಪ್ರಮಾಣಪತ್ರಗಳನ್ನು ಹೊಸದಾಗಿ ನೀಡಿ, ಆ ಷೇರುಗಳನ್ನು ವಿದ್ಯುನ್ಮಾನ ರೂಪದಲ್ಲಿ (Demat) IEPFಗೆ ವರ್ಗಾವಣೆ ಮಾಡಲಾಗುತ್ತದೆ. ಆನಂತರದಲ್ಲಿ, ಅಂತಹ ಷೇರುಗಳ ಮೂಲ ಷೇರು ಪ್ರಮಾಣಪತ್ರಗಳನ್ನು ಅಮಾನ್ಯವೆಂದು ಪರಿಗಣಿಸಲಾಗುತ್ತದೆ. ಅದಲ್ಲದೆ, ಷೇರುಗಳನ್ನು IEPFಗೆ ವರ್ಗಾವಣೆ ಮಾಡುವ ಸಲುವಾಗಿ ಷೇರು ಪ್ರಮಾಣ ಪತ್ರಗಳ ನೀಡಿಕೆಗೆ ಸಂಬಂಧಿಸಿದಂತೆ, ಬ್ಯಾಂಕ್ ತನ್ನ ಜಾಲತಾಣದಲ್ಲಿ ಕೊಡಮಾಡಿರುವ ವಿವರಗಳು ಈ ವಿಷಯದ ಕುರಿತಾದ ಪೂರ್ಣಪ್ರಮಾಣದ ನೋಟಿಸು ಎಂದು ಪರಿಗಣಿಸಲಾಗುತ್ತದೆ.

ಈ ಸಂಬಂಧ ಡಿವಿಡೆಂಡ್ ಪಾವತಿಯನ್ನು ಕೋರಿ ಷೇರುದಾರರು ಸಲ್ಲಿಸುವ ಯಾವುದೇ ಮನವಿಯು (ಸೂಕ್ತ ದಾಖಲೆಗಳೊಂದಿಗೆ) **18.08.2023**ರ ಒಳಗಾಗಿ ಬ್ಯಾಂಕಿಗೆ/ ಬ್ಯಾಂಕಿನ ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣಾ ಏಜೆಂಟ್ ಇವರಿಗೆ ತಲುಪದೇ ಇದ್ದ ಪಕ್ಷದಲ್ಲಿ ಈ ಪ್ರಕಟಣೆಯನ್ನೇ ಅಂತಿಮ ನೋಟೀಸು ಎಂಬುದಾಗಿ ಪರಿಗಣಿಸಿ ಅಂತಹ ಡಿವಿಡೆಂಡ್ ಮತ್ತು ಷೇರುಗಳನ್ನು ನಿಗದಿಪಡಿಸಿದ ಕಾರ್ಯವಿಧಾನದ ಪ್ರಕಾರ IEPFಗೆ ವರ್ಗಾಯಿಸಲಾಗುತ್ತದೆ.

ಈ ರೀತಿ IEPFಗೆ ವರ್ಗಾವಣೆಯಾದ ಡಿವಿಡೆಂಡ್ ಮತ್ತು ಷೇರುಗಳನ್ನು ಹಿಂಪಡೆಯಲು IEPF ನಿಯಮಗಳ ಪ್ರಕಾರ ಷೇರುದಾರರು ಪ್ರತ್ಯೇಕ ಅರ್ಜಿಯನ್ನು ನಮೂನೆ IEPF-5ರಲ್ಲಿ ಸಲ್ಲಿಸಬಹುದು. ವಿವರಗಳಿಗಾಗಿ www.iepf.gov.in ಜಾಲತಾಣವನ್ನು ಸಂಪರ್ಕಿಸಬಹುದು.

ಡಿವಿಡೆಂಡ್ ಪಾವತಿಗಾಗಿ ಅಥವಾ ಹೆಚ್ಚಿನ ಮಾಹಿತಿಗಾಗಿ ಶೇರುದಾರರು ಬ್ಯಾಂಕಿನ ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣಾ ಏಜೆಂಟ್- ಇಂಟಿಗ್ರೇಟೆಡ್ ರಿಜಿಸ್ಟ್ರಿ ಮ್ಯಾನೇಜ್ಮೆಂಟ್ ಸರ್ವಿಸಸ್ ಪ್ರೈವೇಟ್ ಲಿಮಿಟೆಡ್ - ನಂಬರ್-30, ರಮಣ ರೆಸಿಡೆನ್ಸಿ, ನಾಲ್ಕನೇ ಕ್ರಾಸ್, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560003 ಇವರನ್ನು ಸಂಪರ್ಕಿಸಬಹುದು. (ದೂ. ಸಂಖ್ಯೆ : 080-23460815-17, ಇ-ಮೇಲ್ : irg@integratedindia.in).

ದಿನಾಂಕ : 11.05.2023
ಸ್ಥಳ : ಮಂಗಳೂರು

ಕರ್ಣಾಟಕ ಬ್ಯಾಂಕ್ ಲಿ. ನ ಪರವಾಗಿ
ಶಾಮ್ ಕೆ.
ಕಂಪನಿ ಕಾರ್ಯದರ್ಶಿ